## ದಿನಾಂಕ: 07/07/2021 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-109 ಚಿಕ್ಕಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು: | | | ಗೈರು ಹಾಜರಿದ್ದ ಇಲಾಖೆ ಸಿಬ್ಬಂಧಿಗಳು |
|---|---|---|---|
| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ | |
| 1 | ಶ್ರೀ. ಎಂ.ಎಸ್. ಉಮೇಶ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ | BWSSB |
| 2 | ಶ್ರೀ. ಮೋಹನ್ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-109 | BESCOM |
| 3 | ಶ್ರೀಮತಿ. ಅಶ್ವಿನಿ.ಟಿ.ಕೆ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-109 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) |
| 4 | ಶ್ರೀಮತಿ. ಪಾರ್ವತಿ. ಜೆ | Link Worker, SWM | ಕಂದಾಯ ಪರಿವೀಕ್ಷಕರು |
| 5 | ಶ್ರೀಮತಿ. ಗಂಗಮ್ಮ. ಎನ್ | Link Worker , SWM | ಸಹಾಯಕ ಕಂದಾಯ ಅಧಿಕಾರಿ |
| 6 | ಶ್ರೀ. ಮಹೇಶ್ ಗೌಡ.ಕೆ.ಆರ್ | ಮಾರ್ಷಲ್, ವಾರ್ಡ್ ಸಂಖ್ಯೆ-109 | ಪೋಲಿಸ್ ಇಲಾಖೆ, ಸಂಚಾರಿ ಮತ್ತು ಕಾನೂನು ಸುವ್ಯವಸ್ಥೆ |
| 7 | ಶ್ರೀ. ಶಿವ ಕುಮಾರ್.ಪಿ | ಸ್ಥಳೀಯ ನಾಗರೀಕರು | |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.

2. <u>ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಚರ್ಚಿಸಿದ ವಿಷಯಗಳು:</u>

| ಕ್ರ ಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | ಬೀದಿಬದಿ ವ್ಯಾಪಾರಿಗಳಿಂದ ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ಹಾಗೂ ರಸ್ತೆ ಅಪಘಾತ ಸಂಭಂವಿಸುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ಬಗ್ಗೆ ಸಭೆಯಲ್ಲಿ ಎಲ್ಲಾ ಸಂಬಂಧಪಟ್ಟ ಇಲಾಖೆಗಳಾದ ಕಾಮಗಾರಿ, ಆರೋಗ್ಯ, ಘನತ್ಯಾಜ್ಯ, ಪೊಲೀಸ್ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ವಿಭಾಗದವರು ಒಟ್ಟಾಗಿ ದಿನಾಂಕ ನಿಗಧಿಪಡಿಸಿ ತೆರವು ಕಾರ್ಯಾಚರಣೆ ಕೈಗೊಳ್ಳು ಸಭೆಯಲ್ಲಿ ತಿಳಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಚಿಕ್ಕಪೇಟೆ, ಸಹಾಯಕ ಅಭಿಯಂತರರು ವಾರ್ಡ್:109, ಆರೋಗ್ಯ ವೈದ್ಯಾಧಿಕಾರಿ(ಚಿಕ್ಕಪೇಟೆ), ಸಹಾಯಕ ಕಾರ್ಯಪಾಲಕ ಅಭಿಯಂತರರು (SWM), ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ವಿಭಾಗ |

ಪ್ರ.ತಿ.ನೋ

Scanned with CamScanner

| | | | |
|---|---|---|---|
| 2 | ವಾರ್ಡ್-109 ವ್ಯಾಪ್ತಿಯಲ್ಲಿ ರಸ್ತೆ ಬದಿಯಲ್ಲಿ ಅನಧೀಕೃತವಾಗಿ ತ್ಯಾಜ್ಯವನ್ನು ಹಾಗೂ Debris ನ್ನು ಸುರಿಯುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. | ಈ ವಿಷಯಕ್ಕೆ ಸಂಬಂಧಿಸಿದಂತೆ ರಸ್ತೆ ಬದಿಯಲ್ಲಿ ಅನಧೀಕೃತವಾಗಿ ತ್ಯಾಜ್ಯವನ್ನು ಹಾಗೂ Debris ನ್ನು ಸುರಿಯುತ್ತಿರುವುದನ್ನು ತಡೆಗಟ್ಟಲು ಪೋಲೀಸ್ ಇಲಾಖೆ ವತಿಯಿಂದ ರಾತ್ರಿ ಪಾಳಯದಲ್ಲಿ ಹೆಚ್ಚುವರಿಯಾಗಿ ಈ ಪ್ರದೇಶದಲ್ಲಿ Night Patroling ಮಾಡಲು ಹಾಗೂ ಈಗಾಗಲೇ ಸಂಗ್ರಹಣಗೊಂಡಿರುವ Debris ಮತ್ತು ತ್ಯಾಜ್ಯವನ್ನು ತೆರುವುಗೊಳಿಸಲು ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. | ಸಹಾಯಕ ಕಾರ್ಯಪಾ[ಲಕ] ಅಭಿಯಂತರರು ಚಿಕ್ಕಪೇಟ[ೆ], ಸಹಾಯಕ ಅಭಿಯಂತರರು ವಾರ್ಡ್:109, ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ವಿಭಾಗ |
| 3 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ 18 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಲಸಿಕೆ ನೀಡುವ ಬಗ್ಗೆ | ಕೋವಿಡ್ ಲಸಿಕೆ 18 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಲಸಿಕೆ ನೀಡುವ ಕಾರ್ಯಕ್ರಮವನ್ನು ಆರೋಗ್ಯ ವೈದ್ಯಾಧಿಕಾರಿ ರವರು ಆಯೋಜಿಸಿದ್ದು ಸದರಿ ಕಾರ್ಯಕ್ರಮವನ್ನು ಸ್ಥಳೀಯ ಶಾಸಕರ ಮುಖಾಂತರ ಉದ್ಘಾಟಿಸಿ ಪ್ರಾರಂಭಿಸಲಾಯಿತು. | ಆರೋಗ್ಯ ವೈದ್ಯಾಧಿಕಾರಿ, ಚಿಕ್ಕಪೇಟೆ |
| 4 | ಮಾನ್ಯ ಆಡಳಿತ ಅಧಿಕಾರಿಗಳ ಆದೇಶದನ್ವಯ 2021-22 ನೇ ಸಾಲಿನ ಅಯವ್ಯಯದಲ್ಲಿ ಸಿದ್ಧತೆ ಪೂರ್ವದಲ್ಲಿ ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರು ಸಲಹೆ ಸೂಚನೆ ನೀಡುವ ಬಗ್ಗೆ. | ಈ ಬಗ್ಗೆ ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರೊಂದಿಗೆ ಚರ್ಚಿಸಲಾಗಿ 2021-22ನೇ ಸಾಲಿನ ಅಯವ್ಯಯದಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿರುತ್ತಾರೆ.<br>1. Potholes ಮುಕ್ತ ರಸ್ತೆ ನಿರ್ಮಾಣ ಮಾಡುವ ಬಗ್ಗೆ.<br>2. ಘನತ್ಯಾಜ್ಯ ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ.<br>3. ವಾರ್ಡ್ ವ್ಯಾಪ್ತಿಯಲ್ಲಿ ಹೂಳು ತುಂಬಿರುವ ರಸ್ತೆಬದಿ ಚರಂಡಿ ದುರಸ್ಥಿಗೊಳಿಸುವ ಬಗ್ಗೆ.<br>4. ಹಾಳಾಗಿರುವ ರಸ್ತೆ ಮತ್ತು ಫುಟ್‌ಪಾತ್‌ಗಳಿಗೆ ದುರಸ್ಥಿ ಕಾಮಗಾರಿಗಳು ಕೈಗೊಳ್ಳುವ ಬಗ್ಗೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಚಿಕ್ಕಪೇಟೆ, ಸಹಾಯಕ ಅಭಿಯಂತರರು ವಾರ್ಡ್:109 |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು &
ನೋಡಲ್ ಅಧಿಕಾರಿ

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

Scanned with CamScanner